# ನಡುಗನ್ನಡ ಸಾಹಿತ್ಯದ ರೂಪಗಳು



## ವಚನ ಸಾಹಿತ್ಯ :

ಮಧ್ಯಕಾಲೀನ ಸಾಹಿತ್ಯದ ವೈಶಿಷ್ಟ್ಯವಿರುವುದೇ 'ವಚನ' ಸಾಹಿತ್ಯ ರೂಪದ ಉದಯದಲ್ಲಿ. ವಚನ ವಾಙ್ಮಯದ ಉದಯ ಧರ್ಮಜೀವನದ ಮೂಲವಾದಲ್ಲಿ ತಾವು ಬೋಧಿಸುವುದು ಸಾಮಾನ್ಯ ಜನರಿಗೂ ತಲುಪಬೇಕು ಎಂಬ ಆಶಯ ಹೊಂದಿದ ವೀರಶೈವ ಶರಣರು ಜನ ಸಾಮಾನ್ಯರ ಭಾಷೆಯಲ್ಲಿಯೇ ತಮ್ಮ ಭಾವನೆಗಳನ್ನು ತತ್ವಗಳನ್ನು ನಿರೂಪಿಸಿದರು. ಅವರ ಆತ್ಮ ನಿರೀಕ್ಷಣೆ ಆತ್ಮಾನುಭವಗಳೇ, ವಚನ, ರೂಪದಲ್ಲಿ ಅಭಿವ್ಯಕ್ತಿ ಪಡೆದಿವೆ. ವಿಶ್ವ ಸಾಹಿತ್ಯಕ್ಕೆ ಕನ್ನಡದ ವಿಶಿಷ್ಟ ಕೊಡುಗೆಯೆನಿಸಿವೆ.

ಈ ವಚನದ ಮೂಲಕ ಹಾಗೂ ಸ್ವರೂಪವನ್ನು ಕುರಿತು ಸಾಕಷ್ಟು ಚರ್ಚೆಗಳು ನಡೆದಿವೆ. ತಮಿಳಿನ 'ತೇವಾರಂ' ಎಂಬ ಹಾಡುಗಳೇ ಕನ್ನಡ ವಚನಗಳಿಗೆ ಮೂಲವೆಂದು ಡಿ. ಎಲ್. ನರಸಿಂಹಚಾರ್. ಹೇಳುತ್ತಾರೆ. ವೇದ ಉಪನಿಷತ್ತು ಆಖ್ಯಾನಗಳ ಗದ್ಯದ ಸರಣಿಯನ್ನು ಕಸಿಕಟ್ಟಿ ತಮ್ಮ ವಚನ ಪ್ರಕಾರವನ್ನು ಶರಣರು ನಿಷ್ಪನ್ನಮಾಡಿಕೊಂಡರೆಂದು ಎಲ್. ಬಸವರಾಜು, ಹೇಳುತ್ತಾರೆ. ಎಂ. ಚಿದಾನಂದಮೂರ್ತಿ ಅವರ ಪ್ರಕಾರ ವಚನಗಳು ಯಾವುದೇ ಹೊರಗಿನ ಮಾದರಿಯನ್ನು ಅನುಸರಿಸಿ ಅಥವಾ ಅನುಕರಿಸಿ ಹುಟ್ಟಿದವಲ್ಲ ಪರಿಸರದ ಒತ್ತಡ ಅಥವಾ ಪರಿಸರದ ಒತ್ತಡ ಅಥವಾ ಅಗತ್ಯವಾದ ಅನಿವಾರ್ಯತೆಯಿಂದಾಗಿ ಸಾಮಾನ್ಯ ಜನತೆಗೆ ಸಮೀಪವಾದ ಮತ್ತು ಪ್ರಿಯವಾದ ತ್ರಿಪದಿ, ಚೌಪದಿ ಮುಂತಾದ ಪದ್ಯಬಂಧಗಳ ಒಗಟು, ಗಾದೆಗಳ ಪ್ರಭಾವಗಳಿಂದ ಆ ಪ್ರಕಾರ ಒಂದು ರೂಪವನ್ನು ಪಡೆದುಕೊಂಡಿತು. ಹೀಗಾಗಿ ವಚನಕಾರರೇ ವಚನ ಸಾಹಿತ್ಯದ ಮೂಲಿಗರು ಎನ್ನಲಾಗಿದೆ.

ವಚನಗಳು ಹೇಗೆ ಹುಟ್ಟಿದವು ಎನ್ನುವಷ್ಟೇ ಜಟಿಲ. ಅವು ಯಾವಾಗ ಹುಟ್ಟಿದವು ? ಎಂಬ ಪ್ರಶ್ನೆ ಬಸವಣ್ಣನ ಕಾಲದಲ್ಲಿ ಪ್ರಮುಖ ಪ್ರಕಾರವಾಗಿ ಮೆರೆದ ಈ ವಚನ ರೂಪ ಅವನಿಗಿಂತ ಮೊದಲೇ ಜನ್ಮ ತಾಳಿತ್ತು ಎನ್ನಲು ಆಧಾರಗಳಿವೆ. ಸು. ೧೧೫೦ ರಲ್ಲಿದ್ದ ಜೇಡರ ದಾಸಿಮಯ್ಯನೇ ಇದರ ಮೊದಲ ಹರಿಕಾರನೆಂದು ತಿಳಿದಿದ್ದ ಅಭಿಪ್ರಾಯ ಈಗ ಆತನ ಕಾಲ ೧೧೪೦ ಎಂದಾಗಿದೆ. ಅವನ ವಚನಗಳಲ್ಲೇ ಆದ್ಯರ ವಚನಗಳ ಉಲ್ಲೇಖ ದೊರಕುತ್ತದೆ. ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ ಇವರಿಂತ ಸ್ವಲ್ಪ ಮುಂಚೆ ವಚನ ರಚನೆಯಾಗಿರಬಹುದೆಂದು ತಿಳಿಯಲಾಗಿದೆ. ಪಂಪ ಪೂರ್ವದಲ್ಲಿಯೇ ವಚನದ ಉಗಮವನ್ನು ಕೆಲವು ಪಂಡಿತರು ಊಹಿಸುತ್ತಾರೆ.

'ವಚನ' ಎಂದರೆ 'ಮಾತು' ಎಂದರ್ಥ ನಾವಾಡುವ ಮಾತು ಗದ್ಯದಲ್ಲಿರುತ್ತದೆ. ಚಂಪೂಕಾವ್ಯಗಳಲ್ಲಿ ಅಲ್ಲಲ್ಲಿ ಬಳಸುತ್ತಿದ್ದ ಗದ್ಯವನ್ನು ವಚನವೆಂದೇ ಕರೆಯುತ್ತಿದ್ದರು. ಶಿವಶರಣರ ಬೋಧನೆಯು ಗದ್ಯರೂಪದಲ್ಲಿದ್ದುದರಿಂದ 'ವಚನ' ಎಂಬ ಹೆಸರು ಬಂದಿರಬೇಕು. ಆದರೆ ವಚನದ ಅರ್ಥ ವಿಶಿಷ್ಟವಾದುದು. ತೀ. ನಂ. ಶ್ರೀ ಯವರು ಹೇಳುವಂತೆ 'ವಚನಗಳ ಧಾಟಿ ಪದ್ಯದಷ್ಟು ಬಿಗಿಯಲ್ಲ ಸಾಮಾನ್ಯ ಗದ್ಯದಷ್ಟು ಸಡಿಲುವೂ ಅಲ್ಲ' ಸೂಕ್ಷ್ಮವಾಗಿ ವಿಚಾರಿಸಿದರೆ ಗದ್ಯ ಪದ್ಯದ ನಡುವಿನ ಒಂದು ಮಾದರಿ ಇಷ್ಟೇ ಪಾದ, ಇಂಥದೇ ಗಣವೆಂಬ ನಿಯಮವಿಲ್ಲದೆ ಅಂಶಗಣ ಅಥವಾ ಮಾತ್ರಾಗಣ ಭಾವಕ್ಕೆ ತಕ್ಕಂತೆ ಹಿರಿದಾಗಿ ಕಿರಿದಾಗಿ ಒದಗುತ್ತದೆ. ಈ ವಚನಗಳನ್ನು ಹಾಡುವ ದಾಟಿಯಲ್ಲಿ ಬರೆದರೆ ? ಹಾಡುತ್ತಿದ್ದರೆ ? ಎಂಬ ಊಹೆಗೆ ಅವಕಾಶವಿದೆ. ಬಸವಣ್ಣನು 'ಆನು ಒಲಿದಂತೆ ಹಾಡುವೆ' ಎಂದಿದ್ದಾನೆ. 'ಅರವತ್ತೆಂಟು ಸಹಸ್ರ ವಚನಗಳ ಹಾಡಿ ಹಾಡಿ ಸೋತಿತೆನ್ನ ಮನ ನೋಡಯ್ಯ ಎಂದು ಸಿದ್ಧರಾಮ ಹೇಳುತ್ತಾನೆ. 'ಗೀತಮಂ ಪಾಡೆ' ಎಂದು ಹರಿಹರ, ಬಸವರಾಜ ದೇವರ ರಗಳೆಯಲ್ಲಿ ಬರೆಯುತ್ತಾನೆ. ಆದರೆ ವಚನಗಳು ಗೀತ ಜಾತಿಗೆ ಸೇರಿದವುಗಳಲ್ಲ. ಅವು ಸೂಕ್ಷ್ಮ ಸ್ವಚ್ಛಂದ ಲಯದ ಗದ್ಯ ಕವನಗಳು. ಶರಣರ ಈ ಅನುಭಾವ ಗದ್ಯದಲ್ಲಿ ಭಾವಗೀತೆಯ ಮೂಲ ಪ್ರೇರಣೆಯಿದೆ. ಆದರೆ ನಿಯತ ಛಂದಸ್ಸಿನ ಇಲ್ಲವೆ ತಾಳಲಯದ ಯೋಚನೆ ಇಲ್ಲ. ಪದ್ಯದ ಸೊಗಸನ್ನು ಗದ್ಯದ ವಿಚಾರ ಸರಣಿಯನ್ನು ತುಂಬಿಕೊಂಡ ಲಯಬದ್ಧ ಪಟುಸ್ಥಲ ಸ್ಪಟಿಕ ಶಲಾಕೆಗಳು ಈ ವಚನಗಳೆಂದು ಹೇಳಬಹುದು.

ಶರಣರು ತಮ್ಮ ಪರಿಸರದೊಂದಿಗೆ ಸ್ಪಂದಿಸಿದ ಕ್ರಿಯೆಯ ಫಲವೇ ವಚನಗಳು. ಅವು ಮೂಲತಃ ಪ್ರತಿಭಟನಾತ್ಮಕವಾಗಿವೆ. ಅವುಗಳ ಒಟ್ಟು ಉದ್ದೇಶ ನವಸಮಾಜವೊಂದರ ನಿರ್ಮಾಣ ಮಾಡುವದಾಗಿದೆ. ವಚನಗಳ ಮೂಲಕ ಇವರು ಆ ಕಾಲದ ಇಡೀ ಜನಜೀವನವನ್ನೇ ಕಲಕಿದರು. ಅವರಿಗೆ ಆಂದೋಲನವೆಂದರೆ, ಹೊಸ ಜೀವನ ಹೊಸ ಜೀವನವೆಂದರೆ, ಜನ ಆಲೋಚಿಸುವಂತೆ ಮಾಡುವುದು. ಆಲೋಚಿಸುವಂತೆ ಮಾಡಬೇಕಾದರೆ ಆತ್ಮ ವಿಶ್ವಾಸ ಮೂಡಿಸಬೇಕು. ದೇವಸ್ಥಾನಗಳ

Scanned with CamScanner

ನಿರಾಕರಣೆ ಎಲ್ಲಾ ಜಾತಿ ಒಂದೇ ಎಂಬ ಅರಿವು ಸಮಯ ಬಂದರೆ ಪ್ರಭುತ್ವವನ್ನು ಧಿಕ್ಕರಿಸುವುದು. ಇಂಥ ವಿಚಾರಗಳು ಹಳೆಯ ಪರಂಪರೆಗೆ ಸಿಡಿಮದ್ದಾಗಿ ಪರಿಣಮಿಸಿದುವು. ಇಡೀ ವ್ಯವಸ್ಥೆಯೇ ಬೇರು ಸಹಿತ ಅಲುಗಾಡುವಂತಾಯಿತು. ಹೊಸ ಚೈತನ್ಯ ಮೂಡಿತು. ಈ ಆತ್ಮ ವಿಶ್ವಾಸದ ಫಲವಾಗಿಯೇ ಅತ್ಯಂತ ಸಾಮಾನ್ಯ ವರ್ಗದ ಜನ, ನಾನಾ ಬಗೆಯ ಕೆಲಸಗಾರರು, ನೂರಾರು ಪುರುಷರು ಸ್ತ್ರೀಯರು ಸಾಮೂಹಿಕವಾಗಿ ವಚನ ಪ್ರಕ್ರಿಯೆಯಲ್ಲಿ ಪಾಲ್ಗೊಂಡರು. ಒಂದು ವಿಧದಲ್ಲಿ ವಚನವು ಸಾಮೂಹಿಕ ಅಭಿವ್ಯಕ್ತಿ ಹೌದು. ವಚನವು ಒಂದು ಆಧ್ಯಾತ್ಮಶಾಸ್ತ್ರ ಸಂಸ್ಕೃತದಲ್ಲಿದ್ದ ಈ ಶಾಸ್ತ್ರಕ್ಕೆ ಜನವಾಣಿಯನ್ನು ಕೊಟ್ಟವರು ವಚನಕಾರರು. ಆಧ್ಯಾತ್ಮ ಧರ್ಮ,. ನೀತಿ ದೇವರು ಮುಂತಾದ ತತ್ವಗಳನ್ನು ಸುಲಭ ನುಡಿಗಳಲ್ಲಿ ನಿರೂಪಿಸಿ 'ಕನ್ನಡದ ಉಪನಿಷತ್ತು' ಗಳೆಂದು ವಚನಗಳನ್ನು ಸಾರ್ಥಕಗೊಳಿಸಿದರು. ಮಾನವ ಪ್ರೇಮ, ನೀತಿ, ನಿಷ್ಠೆ, ಶಿವಭಕ್ತಿ ಸಮಾನ ಭಾವ, ಆತ್ಮಪರಿವೀಕ್ಷಣೆ ಮುಂತಾದ ಭಾವಗಳಿಂದ ತುಂಬಿದ ಹೊಸ ಸಮಾಜವನ್ನು ವ್ಯವಸ್ಥೆಗೊಳಿಸುವುದು ಅವರ ಉದ್ದೇಶವಾಗಿತ್ತು. ಇದಕ್ಕೆ ಮಾದರಿಯಾಗಿ 'ಅನುಭವ ಮಂಟಪ' ನಿರ್ಮಿಸಿ ನುಡಿದಂತೆ ನಡೆದರು ಎಂದು ವಚನಗಳು ನಡೆದು ತೋರಿದ ನುಡಿಗಳು ಎಂದು ಹೇಳಲಾಗುತ್ತದೆ.

'ವಚನ' ಎಂದರೆ ಮಾತನಾಡಿದ್ದು 'ಪ್ರಮಾಣ' ಎಂಬರ್ಥಗಳಿವೆ. ಕನ್ನಡ ಸಾಹಿತ್ಯದಲ್ಲೆ ಹನ್ನೆರಡನೆಯ ಶತಮಾನದಲ್ಲಿ ವಚನ ಸಾಹಿತ್ಯ ಒಂದು ಪರ್ವಘಟ್ಟ ಕ್ರಾಂತಿ ಘಟ್ಟವಾಗಿದೆ.

ಇದರ ಲಕ್ಷಣಗಳು ಹೀಗಿವೆ.

* ಈ ಕಾಲದ ರಾಜಾಶ್ರಯ ಮತ್ತು ನಿಷ್ಠೆಯ ಹಂಗನ್ನು ತಿರಸ್ಕರಿಸಿತು.
* ಚಂಪೂ ಮಾರ್ಗ ಪರಂಪರೆಯಲ್ಲಿದ್ದ ಸಂಸ್ಕೃತ ಭೂಯಿಷ್ಠತೆಯ ಮುಸುಕನ್ನು ಅದರ ಪ್ರಭಾವದ ಕಪಿಮುಷ್ಟಿಯಿಂದ ಹೊರಬಂದಿತು.
* ವಚನ ರೂಪ ರಚನೆಯು ಸರಳವಾದ ಸುಲಭವಾದ ಆಡು ಮಾತಿನ ಧಾಟಿಯಲ್ಲಿದ್ದು ಜನಾಕರ್ಷಣೆ ಜನಪ್ರಿಯತೆಯನ್ನು ಗಳಿಸಿತು.
* ಅಂದಿನ ಸಾಮಾಜಿಕ, ಧಾರ್ಮಿಕ ಕ್ರಾಂತಿಯ ನೇತಾರ ಬಸವಣ್ಣನ ವರದಿಯಾಗಿ ವಚನಕಾರರಿಂದ ವಚನಗಳ ಸೃಷ್ಠಿಯಾದವು.
* ವಚನ ಸಾಹಿತ್ಯ ಪಂಡಿತರ ವಿದ್ವಾಂಸರ ರಚನೆಯಲ್ಲಿ: ತಮಗೆ ಅನಿಸಿದ್ದನ್ನು ನೇರವಾಗಿ ಸರಳವಾಗಿ ಮಾತನಾಡಿದಂತೆ ವಚನಕಾರರು ರಚಿಸಿದ್ದಾರೆ.
* ವಚನ ಸಾಹಿತ್ಯದ ವೈಶಿಷ್ಟ್ಯವೆಂದರೆ ಅದರ ಮುಕ್ತಕ ರೂಪ.
* ವಚನ ರಚನೆಯಲ್ಲಿ ಪಾಲ್ಗೊಂಡವರು ಅಂದಿನ ಸಮಾಜದ ವಿವಿಧ ವರ್ಗಗಳಿಂದ ಬಂದವರಾಗಿದ್ದ ಜನರಿಂದ, ಅಂಬಿಗರ ಚೌಡಯ್ಯ, ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ ಎಂಬ ಹೆಸರುಗಳು ಅವರವರ ಕಾಯಕ ಮತ್ತು ಸಾಮಾಜಿಕ ಸ್ತರಗಳನ್ನು ಸೂಚಿಸುತ್ತವೆ.
* ಲಿಂಗ ಭೇದವಿಲ್ಲದೆ ಸಾಹಿತ್ಯ ಅಭಿವ್ಯಕ್ತಿಯಲ್ಲಿ ಸ್ತ್ರೀ ಪುರುಷರ ಪಾಲ್ಗೊಳ್ಳುವಿಕೆ ಕನ್ನಡ ಸಾಹಿತ್ಯದಲ್ಲಿ ಇದೆ ಮೊದಲನೆಯದಾಗಿದೆ.
* ವಚನಗಳು ನಡುಗನ್ನಡದ ಶೈಲಿಯ ಅನುಭಾವ ಗದ್ಯ, ಚಿಂತನದ ಗದ್ಯದಲ್ಲಿ ಉಸುರಿದ ಅಧ್ಯಾತ್ಮಿಕ ಭಾವಗೀತೆಗಳು.
* ಗಾಂಭೀರ್ಯದ, ವೇದಾಂತದ, ಅಂತರಂಗದ ಅಧ್ಯಾತ್ಮಿಕ ಅನುಭವಗಳನ್ನು ಹೇಳಲು ಸಂಸ್ಕೃತ ಭಾಷೆಗೆ ಮಾತ್ರ ಸಾಧ್ಯ ಎಂಬ ಅರಿಕೆಯನ್ನು ವಚನ ಸಾಹಿತ್ಯವು ಅದಲು ಬದಲು ಮಾಡಿತು.
* ವಚನಗಳು ಅನುಭವದ ಗಾದೆ ಸೂಕ್ಷ್ಮತೆಯೊಡನೆ, ಉಕ್ತಿಯಸಹಜತೆ ಮತ್ತು ಅಲಂಕಾರ ರಮ್ಯತೆಯ ಪ್ರತಿಬಿಂಬಗಳಾಗಿವೆ.
* ತಮ್ಮ ತಮ್ಮ ಆರಾಧ್ಯ ದೈವಮೂರ್ತಿಯಡಿಯಲ್ಲಿ ವಿನಮ್ರಭಕ್ತಿಯ ಪ್ರಾಂಜಲವಾದ ಅಂತರಂಗದ ನಿರೀಕ್ಷಣೆ.
* ಸ್ವಾನುಭಾವ ವೈಯಕ್ತಿಕ ಕಾಯಕಗಳಿಗನುಗುಣವಾದ ಹೋಲಿಕೆ ವ್ಯತ್ಯಾಸಗಳಿಂದ ಪಾರಮಾರ್ಥದ ಅರ್ಥ ಸ್ವರೂಪದ ವಿಶ್ಲೇಷಣೆ.
* ಪ್ರತಿಯೊಂದು ವಚನದ ಕೊನೆಯಲ್ಲಿ ಸಂಬೋಧನ ರೂಪದ ಅಂಕಿತನಾಮಗಳಿರುವುದು ವಚನಗಳ ಮತ್ತೊಂದು ವೈಶಿಷ್ಟ್ಯ.
* ವಚನಗಳ ಗುಣ ಸ್ವಾಭಾವಿಕ ಲಾಲಿತ್ಯ – ಮಾರ್ದವತೆ, ಕ್ವಚಿತ್ತಾದ ಪೌರುಷ್ಯ ಸಾತ್ವಿಕ ಸಂತಾಪ, ಕಟುಟೀಕೆಯಿಂದ ಕೂಡಿರುತ್ತದೆ.

Scanned with CamScanner

* ಹಳಗನ್ನಡವು, ಹೊಸಗನ್ನಡವಾಗಿ ರೂಪಾಂತರವಾಗುತ್ತಿರುವ ಸಂಧಿಕಾಲ ನಡುಗನ್ನಡ ಶೈಲಿ. ಮಾರ್ಗದೇಸಿಗಳ ಸಮನ್ವಯ ಪ್ರಯೋಗ.
* ಪ್ರಾಯೋಗಿಕಾ ದೃಷ್ಟಿಯಲ್ಲಿ ಹಳೆಗನ್ನಡಕ್ಕೆ ಒಪ್ಪದ ವ್ಯಾಕರಣ ದೋಷಗಳು ಪ್ರಯೋಗ ದೋಷಗಳವೆ.
* ಐದುಗೆ, ಮಾಬುದು, ಕಬ್ಬುನ ಮುಂತಾದ ಹಳಗನ್ನಡ ಹೊಸಗನ್ನಡಗಳೆರಡರಲ್ಲೂ ಕಾಣಸಿಗದ ಹಲ ಕೆಲವು ನಡುಗನ್ನಡ ಪದಗಳ ಪ್ರಯೋಗ.
* ಸಮಾಜ ವಿಡಂಬನೆ, ವಚನಗಳ ಮತ್ತೊಂದು ವೈಶಿಷ್ಟ್ಯ.
* ವಚನಕಾರರು ಸಾರಿದ ಸಾರ್ವತ್ರಿಕ ವಿಶ್ವಮಾನವ ಸಂದೇಶಗಳು ನೀತಿ, ನಿಯಮ, ತತ್ವ ಬೋಧನೆ, ಧರ್ಮದ ವ್ಯಾಖ್ಯಾನಗಳು ಹೆಚ್ಚು ಮೌಲಿಕ ಹಾಗೂ ಸರ್ವಾಧರಣೀಯವಾದವುಗಳಾಗಿವೆ.
* ವಚನಗಳಲ್ಲಿ ಕಾವ್ಯ ದೃಷ್ಟಾಂತಗಳ ಚಿತ್ರಣ ತುಂಬಾ ಸೊಗಸಾದದ್ದು ಬಹು ರಮ್ಯವಾದುದ್ದಾಗಿದೆ. ಹೀಗೆ ವಚನ ಸಾಹಿತ್ಯ ಹತ್ತು ಹಲವಾರು ಗುಣಲಕ್ಷಣಗಳನ್ನು ಹೊಂದಿದ್ದು ಕನ್ನಡ ಸಾಹಿತ್ಯದಲ್ಲಿ ಮಾತ್ರವಲ್ಲದೆ ವಿಶ್ವಸಾಹಿತ್ಯದಲ್ಲೇ ಒಂದು ಅವಿಭಾಜ್ಯ ಅಂಗವಾಗಿ ತನ್ನದೇ ಆದ ಸತ್ವಯುತ ಪ್ರಭಾವವನ್ನು ಪಸರಿಸಿಕೊಂಡಿದೆ.

ರಗಳೆ :

'ರಗಳೆ ಕನ್ನಡದ ದೇಶಿ ಛಂದೋರೂಪವಾಗಿದೆ'. ಈ ರೂಪ ಮೊದಲು ಪಂಪನಲ್ಲಿ ಬಳಕೆಗೊಂಡರೂ ಅದರ ಅರ್ಥಪೂರ್ಣ ಸಾರ್ಥಕ್ಯ ಪ್ರಯೋಗದ ರೂವಾರಿ ಹರಿಹರನಲ್ಲಿ ವಿಜೃಂಭಿಸಿದೆ. 'ನಾಗವರ್ಮನು' ತನ್ನ 'ಛಂದೋಂಬುಧಿ' ಯಲ್ಲಿ ರಗಳೆಯ ಲಕ್ಷಣವನ್ನು ಹೀಗೆ ಹೇಳಿದ್ದಾನೆ.

* ಉತ್ಸಾಹ, ಮಂದಾನಿಲ ಹಾಗೂ ಲಲಿತ ರಗಳೆಗಳ ಪ್ರಭೇದಗಳಲ್ಲಿ ೩, ೪, ೫ ಮಾತ್ರೆಯ ಗಣ ನಿಯಮಗಳು ವಿಪರ್ಯಾಸದಿಂದಿರುತ್ತವೆ.
* ಜೋಡಿ ಪದದಿಂದ ಕೂಡಿರುತ್ತದೆ.
* ಮಾತ್ರೆ ಸಮನಾಗಿ ಇರುತ್ತದೆ.
* ತಾಳದ ಗಣನೆಗೆ ಒಳಪಟ್ಟಿರುತ್ತದೆ.
* ನಿಯತವಾದ ಪಾದ ಸಂಖ್ಯೆಯಿಲ್ಲ.

ಹರಿಹರ ಮೂಲತಃ ಆವೇಶ ಪ್ರಧಾನವಾದ ಕವಿ. ಇಂಥ ಆವೇಶ ಮನೋ ಆಕಾಂಕ್ಷೆಗೆ ಪೂರ್ವ ಪರಂಪರೆಯ ಮಾರ್ಗ ಕಾವ್ಯ ಚಂಪೂ ರೀತಿ ಒಗ್ಗುವುದಿಲ್ಲವೆಂದು ತಿಳಿದು ಹರಿಹರನು ರಗಳೆಯನ್ನು ತನ್ನ ಮಾಧ್ಯಮವನ್ನಾಗಿ ಮಾಡಿಕೊಂಡನು. ಶಿವಭಕ್ತಿ ಪಾರಮ್ಯವನ್ನು ಸುಲಲಿತವಾಗಿ ನಿರಂತರವಾಗಿ ನಾದಮಯವಾಗಿ ಪಠನೆಗೈಯಲು ಈ ಪ್ರಕಾರವು ಅತ್ಯುತ್ತಮ ಸಾಧನವಾಯಿತು. ಹೊಸಗನ್ನಡದಲ್ಲಿ ರಗಳೆ ಪ್ರಕಾರದಲ್ಲಿ ಕಾವ್ಯ ರಚನೆ ಗೈದವರೆಂದರೆ ಪು. ತಿ. ನರಸಿಂಹಚಾರ್ಯರ ಅವರ 'ಗಣೇಶ ದರ್ಶನ' ಮಂದಾನಿಲ ರಗಳೆಯಲ್ಲಿದೆ. ಇದರ ಲಯ, ಧಾಟಿ, ಉತ್ಸಾಹವೆಲ್ಲ ಹರಿಹರನ ರಗಳೆಗಳನ್ನು ಹೋಲುತ್ತವೆ. ಆಧುನಿಕ ಕನ್ನಡ ಕಾವ್ಯ ಸಂದರ್ಭದಲ್ಲಿ ರಗಳೆಯ ಸರಳ ರಗಳೆಯಾಗಿ ಬೇರೆ ಬೇರೆ ರೂಪಗಳನ್ನು ತಾಳಿದೆ. ಇಂಗ್ಲೀಷನ ಬ್ಲ್ಯಾಂಕ್‌ವರ್ಸನ ಸಂವಾದಿ ರೂಪವಾಗಿ ಕನ್ನಡದಲ್ಲಿ ಬಳಕೆಯಾಗಿದೆ.

ಕುವೆಂಪುರವರು 'ಸರಳರಗಳೆ' ಯನ್ನು ಸಮರ್ಥವಾಗಿ ಬಳಸಿದರು. ಇದರ ಮುಂದುವರೆದ ರೂಪವಾಗಿ ಬೆಳವಣಿಗೆ ಹೊಂದಿರುವ 'ಶ್ರೀ ರಾಮಾಯಣದರ್ಶನಂ' ನಲ್ಲಿ ಬಳಕೆಗೊಂಡ 'ಮಹಾಛಂದಸ್ಸು' ಒಂದು ಉತ್ತಮ ಪ್ರಯೋಗವಾಗಿದೆ.

ಷಟ್ಪದಿ :

ಇದೊಂದು ಅಚ್ಚಗನ್ನಡ ಛಂದೋ ಪ್ರಕಾರ, ಅಂಶ ಛಂದಸ್ಸಿನ ಮಟ್ಟುಗಳನ್ನು ಲಾಕ್ಷಣಿಕರು 'ಕರ್ನಾಟಕ ವಿಷಯ ಜಾತಿ' ಎಂದಿದ್ದಾರೆ. ಇದರಲ್ಲಿ ಷಟ್ಪದಿ ಒಂದು ನಾಗವರ್ಮನ 'ಛಂದೋಂಬುಧಿ'ಯಲ್ಲಿ ಮೊದಲ ಬಾರಿಗೆ ಇದರ ಪ್ರಸ್ತಾಪವಿದೆ. 'ಷಟ್ಪದಿ' ಎಂದರೆ ಆರು ಸಾಲುಗಳ ಒಂದು ರಚನೆ ೧, ೨, ೪ ಮತ್ತು ೫ನೇ ಪಾದಗಳು ಚಿಕ್ಕವಾಗಿದ್ದು ಸಮನಾಗಿರುತ್ತವೆ.

೩ ಮತ್ತು ೬ನೇ ಪಾದಗಳು ದೊಡ್ಡವಿದ್ದು ಸಮನಾಗಿರುತ್ತವೆ. ಈ ಎರಡು ಸಾಲುಗಳ ಕೊನೆಯಲ್ಲಿ ಗುರು ಕಡ್ಡಾಯವಾಗಿರುತ್ತದೆ. ಈ ಷಟ್ಪದಿಯು ಸ್ವತಂತ್ರವಾಗಿ ಮೊದಲು ಚಂದ್ರ ರಾಜನ 'ಮದನ ತಿಲಕ' ದಲ್ಲಿ ಕಾಣಿಸಿಕೊಂಡಿದೆ. **ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ**ಗಳೆಂಬ ಆರು ಪ್ರಭೇದಗಳ ಜೊತೆಗೆ ರಾಘವಾಂಕನ 'ವೀರೇಶ ಚರಿತೆ' ಯಲ್ಲಿನ **ಉದ್ದಂಡ** ಷಟ್ಪದಿ ಎಂಬ ಹೊಸದೊಂದನ್ನು ಪರಿಚಯಿಸಿದನು. ರಾಘವಾಂಕನು ಕನ್ನಡದಲ್ಲಿ ಮೊದಲು ಸಮರ್ಥವಾಗಿ ತನ್ನ

ಕಾವ್ಯಗಳಾದ 'ಹರಿಶ್ಚಂದ್ರ ಕಾವ್ಯ' 'ಸಿದ್ಧರಾಮಚರಿತೆ' ಸೋಮನಾಥ ಚರಿತೆಗಳಲ್ಲಿ ಅಳವಡಿಸಿದ್ದಾನೆ. ಅಂದರೆ ಅವುಗಳಲ್ಲಿ ಉತ್ತಮವಾದ ನಿರ್ವಹಣೆಯಿದೆ. ಚಂಪೂ ಕಾವ್ಯದ ಗಾಂಭೀರ್ಯತೆ ವಚನಕಾರರ ಗದ್ಯದ ಹದ, ರಗಳೆಯ ಮೇಳವಿಸಿ ಕೊಡುತ್ತಾನೆ ; ಎಂಬ ಜಿ. ಎಸ್. ಶಿವರುದ್ರಪ್ಪನವರ ಉಕ್ತಿಯಲ್ಲಿ ಅರ್ಥಸ್ವಾರಸ್ಯವಿದೆ. ರಾಘವಾಂಕನ ನಂತರ ಭೀಮಕವಿ, ವಿರೂಪಾಕ್ಷಪಂಡಿತ ಮುಂತಾದವರು ಈ ಷಟ್ಪದಿ ಮಾರ್ಗವನ್ನು ಮುನ್ನಡೆಸಿದರು. ಆದರೆ ಷಟ್ಪದಿ ಪರಂಪರೆಯ ಶಿಖರಗಳಂತಿರುವ ಕುಮಾರವ್ಯಾಸ, ಚಾಮರಸ ಮತ್ತು ಲಕ್ಷ್ಮೀಶ. ಈ ಪ್ರಕಾರಕ್ಕೆ ಭದ್ರ ಬುನಾದಿಯನ್ನು ಹಾಕಿದ್ದಾರೆ. ಕುಮಾರವ್ಯಾಸ ಯುಗ ಪ್ರವರ್ತಕ ಮಹಾಕವಿಯಾಗಿದ್ದಾನೆ. ಕುಮಾರವ್ಯಾಸ ಭಾರತ **'ಕಲಿಯುದವರಿಗೆ ಕಾಮಧೇನು'** ವಾಗಿ ಕನ್ನಡ ಜನಮನವನ್ನು ಸೂರೆಗೊಂಡಿದೆ. ಆಧುನಿಕ ಕಾಲದಲ್ಲೂ ಕೂಡ ಷಟ್ಪದಿಯಲ್ಲಿ ಕಾವ್ಯ ರಚಿಸಿರುವವರನ್ನು ಕಾಣಬಹದು. ಕುವೆಂಪು, ಡಿ. ವಿ. ಜಿ, ಅಡಿಗ, ಬೇಂದ್ರೆ, ಗೋವಿಂದ ಪೈ, ರವರ ಮೊದಲ ಕಾವ್ಯಗಳಲ್ಲಿ ಷಟ್ಪದಿಯ ಪ್ರಯೋಗಗಳನ್ನು ಕಾಣಬಹುದಾಗಿದೆ.

ಕೀರ್ತನೆ :

ಕನ್ನಡ ಸಾಹಿತ್ಯ ಸಂದರ್ಭವಾದ ವೈಷ್ಣವ ಭಕ್ತಿಯು ಪ್ರವಹಿಸುವ ಕಾಲದಲ್ಲಿ ಹರಿದಾಸರ ಸುಳಾದಿ ಉಗಾಭೋಗಾದಿಗಳನ್ನುಳಿದ ಬಿಡಿರಚನೆಗಳ ಸಮೂಹಕ್ಕೆ ಕೀರ್ತನೆ ಎಂಬ ಅಭಿದಾನ ನೀಡಲಾಗಿದೆ. 'ಕೀರ್ತನೆ' ಎಂಬುದಕ್ಕೆ ಭಾಗವತದಲ್ಲಿ ಸ್ತುತಿ, ಸ್ತೋತ್ರ, ಎಂಬರ್ಥಗಳಿವೆ. 'ಕೀರ್ತನೆ' ಎಂಬುದು ಕನ್ನಡ ಸಂವಾದ ಪದ ವೀರಶೈವ ಧರ್ಮದ ಉತ್ಕರ್ಷದ ಕಾಲದಲ್ಲಿ ಹೇಗೆ ವಚನಗಳು ಸೃಷ್ಟಿಯಾದವೋ ಅದೆ ರೀತಿ ಭಾಗವತ ಪರಂಪರೆಯ ಉತ್ಕರ್ಷದ ಸಂದರ್ಭದಲ್ಲಿ ಕೀರ್ತನೆಗಳು ಹುಟ್ಟಿಕೊಂಡಿವೆ. ಕನ್ನಡನಾಡಿನಲ್ಲಿ ರಾಮಾನುಜರ ಮತ್ತು ಮಾಧ್ವರ ಪ್ರಭಾವ ಹಾಗೂ ಪ್ರಾಬಲ್ಯದಿಂದ ಎರಡು ವೈಷ್ಣವ ಪಂಥಗಳನ್ನು ಗುರ್ತಿಸಬಹುದು. ಹದಿಮೂರನೇ ಶತಮಾನದ ಕೊನೆಯ ಭಾಗದಲ್ಲಿದ್ದ ನರಹರಿತೀರ್ಥರು ಈ ಪರಂಪರೆಯ ಆದ್ಯ ಪ್ರವರ್ತಕರು. ನಂತರ ಶ್ರೀಪಾದರಾಯ, ವ್ಯಾಸರಾಯ, ಪುರಂದರದಾಸರು, ಕನಕದಾಸರು ಕೀರ್ತನೆಗಳಲ್ಲಿ 'ದಾಸವಾಙ್ಮಯವು ಉತ್ತುಂಗ ಶಿಖರವನ್ನು ಮುಟ್ಟಿತು. ತರುವಾಯ ವಾದಿರಾಜ, ವಿಜಯದಾಸ, ಜಗನ್ನಾಥದಾಸ, ಪ್ರಸನ್ನ ವೆಂಕಟದಾಸ ಮೊದಲಾದವರು ಈ ಪರಂಪರೆಯನ್ನು ಮುಂದುವರೆಸಿದರು. ಆದಿ ದೈವವನ್ನು ಕುರಿತು ದಾಸರು ಕಟ್ಟಿದ 'ಹಾಡುಗಬ್ಬವೇ' ಕೀರ್ತನೆಗಳು, ಕೀರ್ತನೆಯ ಲಕ್ಷಣಕ್ಕೆ ಹೊಂದಿಕೊಳ್ಳುವಂಥ ರಚನೆಗಳು ೧೨ನೇ ಶತಮಾನದ ಶಿವಶರಣರಲ್ಲಿ ಕಾಣುತ್ತವೆ.

ಕೀರ್ತನೆಗಳು ಪಲ್ಲವಿ,·ಅನುಪಲ್ಲವಿ, ನಂತರ ನಾಲ್ಕು ಪಾದಗಳ ಕೆಲವು ಪದ್ಯಗಳು ಇರುವುದು ಇದರ ರೂಪವಾಗಿದೆ. ಮಾಧ್ವಮತೆ ತತ್ವಜ್ಞಾನ ತಾರತಮ್ಯಗಳನ್ನು ಅನುಸರಿಸಿ ದೇವತಾಸ್ತುತಿ, ಭಗವಂತನ ವಿವಿಧ ಅವತಾರ ಲೀಲೆಗಳ ಉಲ್ಲೇಖ, ಸ್ವಾಭಾವಿಕ ಒಲವು – ನಿಲುವು, ಮಾನಸಿಕ ತೊಳಲಾಟ, ಬಳಲಾಟ, ಸಮಾಜ ವಿಡಂಬನೆ ಮತ್ತು ವಿಮರ್ಶೆ, ಈ ಕೀರ್ತನೆಗಳ ವಸ್ತುವಾಗಿದೆ. ಪುರಂದರದಾಸರ ಕೀರ್ತನೆಯಿಂದ 'ಕರ್ನಾಟಕ ಸಂಗೀತ' ಉದಯವಾದದ್ದು ಒಂದು ಮಹತ್ವದ ವಿಷಯ, ಕೀರ್ತನೆಗಳ ಕೊಡುಗೆ ಕನ್ನಡ ಸಾಹಿತ್ಯಕ್ಕಿಂತ ಕರ್ನಾಟಕ ಸಂಗೀತಕ್ಕೆ ಅಪಾರವಾಗಿ ಅದಮ್ಯವಾಗಿ ನೀಡಿರುವುದು ವಿಶೇಷವಾಗಿದೆ.

ಹೀಗೆ ಕೀರ್ತನ ಸಾಹಿತ್ಯವು ಕೇವಲ ಹರಿದಾಸರಿಂದಲ್ಲದೆ ಷಡಕ್ಷರಿ, ನಿಜಗುಣ ಶಿವಯೋಗಿ, ಮತ್ತಿತರರಿಂದ ಮತ್ತಷ್ಟು ಉಜ್ವಲವಾಗಿ ಉತ್ಕೃಷ್ಟವಾಗುತ್ತಾ ಸಾಗಿದೆ.

ಸಾಂಗತ್ಯ :

ಇದೂ ಕೂಡ ದೇಸಿ ಛಂದೋ ಪ್ರಕಾರ ಮತ್ತು ಜೊತೆಗೆ ಹಾಡುಗಬ್ಬವು ಸಹ. ನಾಗವರ್ಮನು 'ಛಂದೊಂಬುಧಿ' ಯಲ್ಲಿ ಕರ್ನಾಟಕ ವಿಷಯ ಜಾತಿಯ ಪಟ್ಟಿಯಲ್ಲಿ ಸಾಂಗತ್ಯ ಸೇರಿಸಿಲ್ಲ. ಸಾಂಗತ್ಯವು ಮೊದಲಿಗೆ (೧೪೦೦) ದೇವರಾಜನ 'ಸೊಬಗಿನ ಸೋನೆ' ಎಂಬ ಕೃತಿಯಲ್ಲಿ ಬಳಕೆಯಾಗಿದೆ. ತ್ರಿಪದಿಗಿಂತ ಬಹು ಜನಪ್ರಿಯ ಮತ್ತು ಕವಿಪ್ರಿಯವಾದ ಸಾಹಿತ್ಯ ರೂಪವಾಗಿದೆ. ಇದು ಅಂಶಗಣ ಛಂದಸ್ಸಿನಲ್ಲಿದ್ದು, ಅದರ ಲಕ್ಷಣಗಳನ್ನು ಹೀಗೆ ಹೆಸರಿಸಬಹುದಾಗಿದೆ.

* ಸಾಂಗತ್ಯವು ನಾಲ್ಕು ಪಾದಗಳನ್ನು ಹೊಂದಿರುತ್ತದೆ.
* ಆದಿ, ದ್ವಿತೀಯಾಕ್ಷರದಲ್ಲಿ ನಿಯತವಾಗಿ ಪ್ರಾಸವು ಬರುತ್ತದೆ.
* ೧ ಮತ್ತು ೩ ನೇ ಪಾದಗಳಲ್ಲಿ ನಾಲ್ಕು – ನಾಲ್ಕು ವಿಷ್ಣುಗಳು ಬರುತ್ತವೆ.
* ೨ ಮತ್ತು ೪ ನೇ ಪಾದಗಳಲ್ಲಿ ಎರಡು – ವಿಷ್ಣುಗಳು ಒಂದು ಬ್ರಹ್ಮಗಣವು ಬರುತ್ತದೆ.
* ಒಟ್ಟು ೧೪ ಗಣಗಳು ಬಂದು ೭ನೇ ಮತ್ತು ೧೪ನೇ ಗಣಗಳಲ್ಲಿ ಬ್ರಹ್ಮಗಣ ಬರಬೇಕು. ಸಾಂಗತ್ಯ ವಿಷ್ಣುಗಣ ಪ್ರಧಾನವಾದ ಛಂದೋಮಟ್ಟ ಇದು ಶುದ್ಧ ಛಂದಸ್ಸು ದೇಶಿಯ ಛಂದಸ್ಸು.

ಕನ್ನಡ ಛಂದೋ ಪ್ರಪಂಚಕ್ಕೆ ಸಾಂಗತ್ಯವು ಅರ್ವಾಚೀನವಾಗಿ ಪ್ರವೇಶಿಸಿದರೂ, ಬಹುಬೇಗ ಜನಪ್ರಿಯವಾಯಿತು. ಕನ್ನಡದಲ್ಲಿ ಇಪ್ಪತ್ತೈದಕ್ಕೂ ಹೆಚ್ಚು ಸಾಂಗತ್ಯ ಕವಿಗಳಿದ್ದರು. ಅವರಲ್ಲಿ ಪ್ರಮುಖವಾಗಿ ಹೆಚ್ಚು ಸಮರ್ಥವಾಗಿ ನಿರ್ವಹಿಸಿ ಕೃತಿ ಗೈದ ಮಹನೀಯರೆಂದರೆ **ಶಿಶುಮಾಯಣ, ನಂಜುಂಡ, ಕನಕದಾಸ, ರತ್ನಾಕರವರ್ಣಿ, ಕಲ್ಯಾಣಕೀರ್ತಿ, ಸಂಚಿಹೊನ್ನಮ್ಮ,**

Scanned with CamScanner

ಮುಂತಾದವರಾಗಿದ್ದಾರೆ. ಹೊಸಗನ್ನಡದಲ್ಲಿ ಆಧುನಿಕ ಛಂದಸ್ಸಿನ ನಾಂದಿ ಸ್ವರೂಪವಾಗಿ ಸಾಂಗತ್ಯವು ಹಲವು ಕವಿಗಳಲ್ಲಿ ಕಾಣಿಸಿಕೊಂಡಿದೆ. ಎಸ್.ವಿ. ಪರಮೇಶ್ವರಭಟ್ಟರ 'ಇಂದ್ರ ಚಾಪ' ಮತ್ತು 'ಚಂದ್ರವೀದಿ' ಗಳಲ್ಲಿ ಸಾಂಗತ್ಯರೂಪವು ಸಮರ್ಥವಾಗಿ ಯಶಸ್ವಿಯಾಗಿ ಬಳಕೆಯಾಗಿರುವುದನ್ನು ಕಾಣುತ್ತೇವೆ.

Scanned with CamScanner

**ತ್ರಿಪದಿ :**

ಕರ್ನಾಟಕ ವಿಷಯ ಜಾತಿಯಲ್ಲಿ 'ತ್ರಿಪದಿ'ಯ ಚರಿತ್ರೆ ಅಮೂಲಾಗ್ರವಾಗಿ ತಿಳಿದು ಬರುದಿದೆ. ಇದೊಂದು ದೇಸಿ ಛಂದೋ ಪ್ರಕಾರ. ತ್ರಿಪದಿಯ ಪ್ರಥಮ ದಾಖಲೆಯೆಂದರೆ ಕ್ರಿ. ಶ. ೭೦೦ ರಲ್ಲಿದ್ದ ಕಪ್ಪೆ ಅರಭಟ್ಟನ ಮೂರು ತ್ರಿಪದಿಗಳನ್ನು ಬದಾಮಿಯಲ್ಲಿ ಕಾಣಬಹುದಾಗಿದೆ. ಇದು ಕವಿರಾಜ ಮಾರ್ಗದಲ್ಲಿನ **ಬೆದಂಡ, ಚತ್ತಾಣ,** ಲಕ್ಷಣವನ್ನು ಹೇಳುವಾಗ ಕಂದ, ವೃತ್ತ, ಅಕ್ಕರ, ಚೌಪದಿ, ಗೀತಿಕೆಗಳೊಂದಿಗೆ ತ್ರಿಪದಿಯೂ ಕೂಡಿರುತ್ತದೆಯೆಂದು ಕವಿರಾಜಮಾರ್ಗಕಾರ ಹೇಳಿದ್ದಾನೆ. ಜಾನಪದ ಸಾಹಿತ್ಯದಲ್ಲಿ ಕಾಣಸಿಗುವ 'ಏಳೆಯೇ ತ್ರಿಪದಿಯ ಮೂಲವಾಗಿರಬಹುದೆಂಬ ವಿದ್ವಾಂಸರ ಅಭಿಪ್ರಾಯವೊಂದಿದೆ. ಬಿ. ಎಂ. ಶ್ರೀಯವರು, ತ್ರಿಪದಿ ಮೊದಲು ಎರಡು ಸಾಲಿನ ಹಾಡಾಗಿದ್ದು ಆ ಬಳಿಕ ಮೂರು ಸಾಲಾಯಿತೆಂದು ಅರುಹಿದ್ದಾರೆ. ನಾಗವರ್ಮನು ಹೆಸರಿಗೆ ತಕ್ಕಂತೆ ತ್ರಿಪದಿಯ ಲಕ್ಷಣವನ್ನು ಮೂರು ಸಾಲುಗಳಲ್ಲಿ ತನ್ನ ಛಂದೋಂಬುಧಿಯಲ್ಲಿ ನಿರೂಪಿಸಿದ್ದಾನೆ.

**ಬಿಸರು ಹೋದ್ಭವಗಣಂ ರಸದಶ ಸ್ಥಾನದೊಳ್**
**ಬಿಸುರುಹ ನೇತ್ರ ಗಣಮೆ ಬರ್ಕುಟಿದುವು**
**ಬಿಸುರುಹ ನೇತ್ರೆ ತ್ರಿಪದಿಗೆ.**

* ತ್ರಿಪದಿ ಮೂರು ಪಾದಗಳಿರುತ್ತವೆ. ಮೊದಲ ಪಾದದಲ್ಲಿ ನಾಲ್ಕು ಎರಡನೇ ಪಾದದಲ್ಲಿ ನಾಲ್ಕು ಮೂರನೆ ಪಾದದಲ್ಲಿ ಮೂರು ಗಣ ಒಟ್ಟು ೧೧ ಗಣಗಳಿರುತ್ತವೆ.
* ೬ ಮತ್ತು ೧೦ ನೆಯ ಗಣಗಳು ನಿಯತವಾಗಿ ಬ್ರಹ್ಮಗಣ, ಬಂದು ಉಳಿದೆಡೆ ವಿಷ್ಣುಗಣಗಳಿಂದ ಕೂಡಿರುತ್ತವೆ.
* ೭ ಮತ್ತು ೧೧ ನೆಯ ಗಣಗಳು ಲಕ್ಷಣಕ್ಕನುಗುಣವಾಗಿ ದ್ವಿಲಘುವಿನಿಂದ ಮೊದಲಾಗಬೇಕು.

ನಾಗವರ್ಮ ತ್ರಿಪದಿಯಲ್ಲಿ **'ಚಿತ್ರ'** ಮತ್ತು **'ಚಿತ್ರಂತೆ'** ಎಂಬ ಎರಡು ಪ್ರಭೇದಗಳನ್ನು ಗುರುತಿಸಿದ್ದಾನೆ. ಜಯಕೀರ್ತಿಯೂ ಚಿತ್ರಾ ಮತ್ತು ವಿಚಿತ್ರಾ ಎಂಬೆರೆಡು ಬಗೆಗಳನ್ನು ತಿಳಿಸಿದ್ದಾನೆ. ಪಂಪ, ಪೊನ್ನ ಮೊದಲಾದ ಮಾರ್ಗ ಕವಿಗಳ ಕಾವ್ಯದಲ್ಲಿ ಕ್ವಚಿತ್ತಾಗಿ ತ್ರಿಪದಿಯ ಪ್ರಯೋಗವಿದೆ.

"ಹಳ್ಳಿಯ ಹಾಡುಗಳಿಂತಿರುವ ಜನಪದ ಸಾಹಿತ್ಯದಲ್ಲಿ ತ್ರಿಪದಿಯದೇ ಪ್ರವಾಹ ಅಚ್ಚುಕಟ್ಟಾದ ಅಡಕವಾದ ಮೂರು ಪಂಕ್ತಿಯ ಈ ಬಂಧ ನೆನಪಿನಲ್ಲಿಡಲು ಸುಲಭವೂ, ಹಾಡಿಕೊಳ್ಳಲು ಅನೂಕೂಲವು ಆದ ಕಾರಣ ಜನಸಾಮಾನ್ಯರ ಅಭಿವ್ಯಕ್ತಿಯಾಗಿ ವಿಶೇಷವಾಗಿ ಕಾಣಿಸಿಕೊಂಡಿದೆ. ಹಾಡುವಾಗ ಎರಡನೆಯ ಪಂಕ್ತಿಯನ್ನು ಪುನರಾವರ್ತನೆ ಮಾಡಿ ಮೂರನೆಯ ಪಂಕ್ತಿಗೆ ಬರುವುದರಿಂದ ತ್ರಿಪದಿಯ ಪಾದಗಳ ಸಂಖ್ಯೆ ನಾಲ್ಕಾಗುತ್ತದೆ" ಎಂದಿದ್ದಾರೆ ಜಿ. ಎಸ್. ಶಿವರುದ್ರಪ್ಪನವರು.

ತ್ರಿಪದಿಯನ್ನು **ತೀರದಿ, ತ್ರಿವಿದಿ, ತಿವದಿಗೆ, ತ್ರಿಪದಿಕಾ, ತಿವುಡೆ, ತ್ರಿಪುಡೆ,** ಎಂಬ್ಹೆಸರುಗಳಿಂದ ಕರೆಯಲಾಗಿದೆ. ತಿರುಮಲಾರ್ಯನು ತ್ರಿಪದಿಯನ್ನು **'ಮಕ್ಕಾಲ್ವಡು'** ಎಂದು ಕರೆದಿದ್ದಾನೆ. ಕನ್ನಡದಲ್ಲಿ ತ್ರಿಪದಿಗಳಲ್ಲಿ ಕೃತಿ ರಚಿಸಿದವರು ವೀರಶೈವರೇ ಆಗಿದ್ದಾರೆ.

Scanned with CamScanner

ಅಕ್ಕಮಹಾದೇವಿ, ಕರಸ್ಥಲದ ನಾಗಿದೇವ, ನಿಜಗುಣ ಶಿವಯೋಗಿ, ಸರ್ವಜ್ಞ ಮತ್ತು ಆಧುನಿಕ ಕಾಲದ 'ಸಿದ್ಧರಾಮೇಶ್ವರ ಪುರಾಣ' ವನ್ನು ಬರೆದ ಜಯದೇವಿತಾಯಿ ಲಿಗಾಡೆ ಮೊದಲಾದವರಾಗಿದ್ದಾರೆ.

ಇವರೆಲ್ಲರ ಸರ್ವಜ್ಞನೇ ತ್ರಿಪದಿಯ ಸಾರ್ವಭೌಮನಾಗಿ ವಚನಕಾರರ ಕಾಲದಿಂದ ಹಿಡಿದು ಹದಿನಾರನೆಯ ಶತಮಾನದೊಳಗಿನ ಅವಧಿಯಲ್ಲಿ ಸರ್ವಜ್ಞ "ವ್ಯವಹಾರ ಜ್ಞಾನ ವಿವೇಕಗಳ ಮೂರ್ತಿ" ಯಾಗಿ ಕನ್ನಡಿಗರ ನಾಲಗೆಯ ಮೇಲೆ ಇಂದಿಗೂ ಚಿರಸ್ಥಾಯಿಯಾಗಿ ನೆಲೆಸಿದ್ದಾನೆ ಎಂದಿದ್ದಾರೆ ಚಿದಾನಂದಮೂರ್ತಿ ಅವರು ಹೇಳುತ್ತಾರೆ.

ಜನಪದ ಸಾಹಿತ್ಯ ಬಹುಪಾಲು ತ್ರಿಪದಿಯಲ್ಲೇ ಇದೆ. ಆದ್ದರಿಂದ ಇದರ ಹುಟ್ಟು ಕನ್ನಡ ಭಾಷೆ ಕಣ್ತೆರದಾಗಿನಿಂದಲೂ ಕನ್ನಡದ ಜೀವನದಿಯಾಗಿ ಹರಿದುಕೊಂಡು ಬಂದಿದೆಯೆಂದು ಹೇಳಬಹುದು.ಹೀಗೆ ತ್ರಿಪದಿ 'ಕನ್ನಡ ಕಾವ್ಯ ಗಂಗೋತ್ರಿ' 'ತಲಕಾವೇರಿ' 'ಜನವಾಣಿಬೇರು, ಕವಿವಾಣಿ ಹೂವು' ಎಂಬಂತೆ ಜನವಾಣಿಯ ಮಾಧ್ಯಮವಾಗಿ ತ್ರಿಪದಿ ಮೆರೆದಿದೆ. ಕನ್ನಡ ಜನಪದ ಸಾಹಿತ್ಯ ವಾಹಿನಿ ಅವತರಿಸಿ ಹರಿದಿರುವುದು ತ್ರಿಪದಿಯ ಕಾಲುವೆಯಲ್ಲಿ ಕನ್ನಡ ಸಾಹಿತ್ಯ ಗಂಗೆ ಅವತರಿಸುವುದಕ್ಕೆ ಮುಂಚೆ ಎಷ್ಟೋ ತಲೆಮಾರುಗಳು ಮಾನ್ಯ ಜನತೆಯ ಜೀವ ಸ್ವರವಾಗಿ ಹುಟ್ಟಿ ಅವರ ಬದುಕಿನ ಸರಸ – ವಿರಸಗಳ ನೋವು – ನಲಿವುಗಳ, ಭಕ್ತಿ – ಭಾವಗಳ ಆಚಾರ – ವಿಚಾರಗಳ, ಅಭಿವ್ಯಕ್ತಿಯ ಮಾಧ್ಯಮವಾಗಿ ಹರಿದು ; ಕನ್ನಡ ನುಡಿ ಬರವಣಿಗೆಗೆ ಇಳಿದ ಮೇಲೆ ಕ್ರಿ. ಶ. ೭ನೇ ಶತಮಾನದ ಬಾದಾಮಿ ಶಾಸನದಲ್ಲಿ ತ್ರಿಪದಿ ಶಾಸನ ಸ್ಥಾಪನವಾಗಿದೆ.

Scanned with CamScanner